ಕರ್ನಾಟಕವು ಹೆಚ್ಚಿನ ನೀರಿನ ಪಾಲನ್ನು ಸೇರಿಸಿ ೯೪೦ ಟಿಎಂಸಿ ನೀರನ್ನು ಬಳಸಿಕೊಳ್ಳಲು ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಿದೆ, ಮತ್ತು ಸ್ಕೀಮ್ 'ಬಿ' ಜಾರಿಗೆ ಬಂದನಂತರ ಈ ನೀರನ್ನು ಬಳಸಿಕೊಳ್ಳಬಹುದಾಗಿದೆ.

ಹೇಮಾವತಿ ನೀರಾವರಿ ಯೋಜನೆಯ ಬಲದಂಡೆ ಕಾರ್ಯ ಪ್ರಗತಿಯ ಕುರಿತು

೧೪೯. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೇಮಾವತಿ ನೀರಾವರಿ ಯೋಜನೆಯ ಎಡದಂಡೆ ಹಾಗೂ ಬಲದಂಡೆ ನಾಲೆಯ ಕೆಲಸದ ಯೋಜಿತ ಉದ್ದ ಎಷ್ಟು ಹಾಗೂ ಇದಕ್ಕಾಗಿ ಬೇಕಾಗುವ ಅದರ ಅಂದಾಜು ಮೊತ್ತವೆಷ್ಟು ?

ಆ) ಈ ಯೋಜನೆಯಡಿ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ನೀರಾವರಿಗೆ ಒಳಪಡುವ ಜಮೀನಿನ ವಿಸ್ತೀರ್ಣ ಹಾಗೂ ನಾಲೆಯ ಉದ್ದವೆಷ್ಟು ?

ಇ) ಈ ಕಾರ್ಯಕ್ಕಾಗಿ ಈವರೆಗೆ ಖರ್ಚು ಮಾಡಿದ ಹಣ ಹಾಗೂ ಸಾಧಿಸಿದ ಪ್ರಗತಿಯೆಷ್ಟು ?

ಈ) ಈ ನಾಲೆ ಎಷ್ಟು ಅವಧಿಯಲ್ಲಿ ಪೂರ್ಣಗೊಳ್ಳುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೇಮಾವತಿ ಎಡದಂಡೆ ನಾಲೆ ಉದ್ದ ೨೧೪ ಕಿ.ಮೀ. ಹಾಗೂ ಮಂಜೂರಾತಿಯಾದ ಯೋಜನಾ ಅಂದಾಜಿನಲ್ಲಿ ೧೯೯.೬೧ ಕೋಟಿ ರೂ.ಗಳು ಅಳವಡಿಸಲಾಗಿದೆ. ಹೇಮಾವತಿ ಬಲದಂಡೆ ನಾಲೆಯ ಉದ್ದ ೯೧ ಕಿ.ಮೀ. ಹಾಗೂ ಮಂಜೂರಾತಿಯಾದ ಯೋಜನಾ ಅಂದಾಜಿನಲ್ಲಿ ೨೬.೨೭ ಕೋಟಿ ರೂ.ಗಳು ಅಳವಡಿಸಲಾಗಿದೆ.

ಆ) ಹೇಮಾವತಿ ಎಡದಂಡೆ ನಾಲೆಯಡಿಯಲ್ಲಿನ ಕೊನೆ ೩೧ ಕಿ.ಮೀ. ಭಾಗದಲ್ಲಿ ೨೬,೬೭೨ ಎಕರೆಗಳು ಹಾಗೂ ವೆ. ಮರಿಯಪ್ಪ ನಾಲೆ (ನಾಗಮಂಗಲ ಉಪನಾಲೆ) ಯಡಿಯಲ್ಲಿನ ಕೊನೆಯ ೨೧ ಕಿ.ಮೀ. ಭಾಗದಲ್ಲಿ ೬೨,೯೪೫ ಎಕರೆಗಳು. ಒಟ್ಟು ೮೯,೬೨೧ ಎಕರೆಗಳು.

ಇ) ಎಡದಂಡೆ ನಾಲೆಗೆ ಒಟ್ಟು ಸುಮಾರು ೩೮೫೧ ಲಕ್ಷ ರೂ.ಗಳು ಮತ್ತು ನಾಗಮಂಗಲ ಉಪನಾಲೆಗೆ ಒಟ್ಟು ಸುಮಾರು ೮೦೦ ಲಕ್ಷ ರೂ.ಗಳು ಫೆಬ್ರವರಿ ೯೦ ರವರೆಗೆ ವೆಚ್ಚ ಮಾಡಲಾಗಿದೆ. ಮುಖ್ಯ ಹಾಗೂ ಉಪ ನಾಲೆಗಳ ಮತ್ತು ವಿತರಣಾ ನಾಲೆಗಳ ಕೆಲಸ ಪ್ರಗತಿಯಲ್ಲಿವೆ.

ಈ) ಎಡದಂಡೆ ನಾಲೆ ೧೯೯೩ ಹಾಗೂ ನಾಗಮಂಗಲ ಉಪನಾಲೆ ೧೯೯೫ರ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಸಣ್ಣ ನೀರಾವರಿ ಇಲಾಖೆಯ ಖರ್ಚು ವೆಚ್ಚಗಳ ಬಗ್ಗೆ

೩೩೩. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) —ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಎಷ್ಟು ವಿಭಾಗಗಳು—ಉಪ ವಿಭಾಗಗಳಿವೆ ?

ಆ) ಮೇಲ್ಕಂಡ ಇಲಾಖೆಗೆ ಸರ್ಕಾರವು ವಾರ್ಷಿಕವಾಗಿ ಖರ್ಚು ಮಾಡುತ್ತಿರುವ ಮೊತ್ತವೆಷ್ಟು?

ಇ) ಮೇಲ್ಕಂಡ ಮೊತ್ತದಲ್ಲಿ ಸಂಬಳ-ಭತ್ಯೆಗಳು ಹಾಗೂ ಇತರ ಸಿಬ್ಬಂದಿ ಶಾಖೆಯ ಖರ್ಚಿನ ಮೊತ್ತವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ರಾಜ್ಯದಲ್ಲಿನ ಸಣ್ಣ ನೀರಾವರಿ ಇಲಾಖೆಯು ೨೦ ವಿಭಾಗಗಳು ಮತ್ತು ೮೩ ಉಪ-ವಿಭಾಗಗಳನ್ನು ಒಳಗೊಂಡಿದೆ.